Grants and Rs.738.84 Crs. received for State Plan Schemes and Rs.758.38 Crs. received for Central Plan Schemes.

g) No Over Draft facility or Ways and Means Advances have been availed in the last financial year. Only NABARD and NCDC loans have been availed.

199 (783) – ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಆಲೂರು ಬೇಲೂರು ಸಣ್ಣ ನೀರಾವರಿ ಕೆರೆಯ ನಿರ್ಮಾಣದ ಕಾಮಗಾರಿಗಳು ಎಂದು ಪ್ರಾರಂಭಗೊಳಿಸಲಾಯಿತು ;

ಆ) ಇದರ ಅಂದಾಜು ವೆಚ್ಚವೆಷ್ಟು ಹಾಗೂ ಇಲ್ಲಿಯವರೆವಿಗೆ ಸರ್ಕಾರದಿಂದ ಬಿಡುಗಡೆ ಮಾಡಿ ಖರ್ಚು ಮಾಡಿರುವ ಹಣದ ಮೊತ್ತವೆಷ್ಟು ;

ಇ) ಈಗ ಈ ಕೆರೆಯ ಕಾಮಗಾರಿಯು ಯಾವ ಹಂತದಲ್ಲಿದೆ ;

ಈ) ಈ ಕೆರೆಗೆ ಇಲ್ಲಿಯವರೆವಿಗೆ ಎಷ್ಟು ಕಾಲುವೆಗಳನ್ನು ನಿರ್ಮಿಸಲಾಗಿದೆ ಮತ್ತು ಎಷ್ಟು ಪ್ರಮಾಣದ ನೀರು ಈ ಕಾಲುವೆಗಳಲ್ಲಿ ಹರಿಯುತ್ತಿದೆ ;

(ಉ) ಈ ಕೆರೆಯ ನಿರ್ಮಾಣ ಪೂರ್ಣಗೊಳ್ಳಲು ಟೈಮ್‌ಬಾಂಡ್ ಕಾರ್ಯಕ್ರಮಗಳನ್ನು ರೂಪಿಸಲಾಗಿದೆಯೇ ; ರೂಪಿಸಿದ್ದಲ್ಲಿ ಇದರ ವಿವರಗಳೇನು ಕೆರೆಯ ನಿರ್ಮಾಣ ಪೂರ್ಣಗೊಂಡಾಗ ಎಷ್ಟು ಎಕರೆ ಕೃಷಿ ಭೂಮಿಗೆ ಇದರಿಂದ ಸಹಾಯಕವಾಗುತ್ತದೆ ;

(ಊ) ಕೆರೆಯ ಯಾವ ಕಾಮಗಾರಿಗಳು ಬಾಕಿ ಉಳಿದಿವೆ ಹಾಗೂ ಈ ಬಾಕಿ ಕಾಮಗಾರಿಗಳಿಗೆ ಯಾವಾಗ ಅನುಮತಿ ನೀಡಲಾಯಿತು ಹಾಗೂ ಯಾವಾಗ ಟೆಂಡರ್ ಕರೆಯಲಾಯಿತು ;

(ಋ) ಕೋಟ್ಯಾಂತರ ರೂಪಾಯಿಗಳನ್ನು ಇಲ್ಲಿಯವರೆಗೆ ವೆಚ್ಚ ಮಾಡಿದ್ದರೂ ಸಹ ಈ ಕೆರೆಯ ನಿರ್ಮಾಣ ಪೂರ್ಣಗೊಳ್ಳದಿರುವುದಕ್ಕೆ ಕಾರಣಗಳೇನು ;